**ಸಾಕ್ಷಿಯನ್ನು ದಿನಾಂಕಃ 10.12.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ. ಜಿ.ಎನ್.ಎನ್. ವಕೀಲರಿಂದಃ**

ನಾನು 2019 ನೇ ಇಸವಿಯಿಂದ ಮೇಟಿಕುಪ್ಪೆ ವಲಯ ಅರಣ್ಯ ಕಛೇರಿಯಲ್ಲಿ ಉಪ-ವಲಯ ಅರಣ್ಯಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದೇನೆ. ದಾವೆ ಸಲ್ಲಿಸುವ ಕಾಲಕ್ಕಾಗಲೀ ಅಥವಾ ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕಾಗಲೀ ನಾನು ಮೇಟಿಕುಪ್ಪೆ ವಲಯ ಅರಣ್ಯ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರಲಿಲ್ಲವೆಂದರೆ ಸರಿ. ದಾವಾ ಆಸ್ತಿಯು ಅರಣ್ಯ ಇಲಾಖೆಗೆ ಸಂಬಂಧಿಸಿದ್ದು ಎಂದು ತೋರಿಸಲು ಪಹಣಿ ಪತ್ರಿಕೆ ಮತ್ತು ಇನ್ನಿತರ ದಾಖಲೆಗಳನ್ನು ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ತಾವು ಹಾಜರುಮಾಡಿರುವ ದಾಖಲೆಗಳಲ್ಲಿ ಪಹಣಿ ಇದೆಯಾ ಎಂದು ಕೇಳಲಾಗಿ ಸಾಕ್ಷಿಯು ದಾಖಲೆಗಳನ್ನು ನೋಡಿ ಇಲ್ಲಾ ಎನ್ನುತ್ತಾರೆ.

**ಈ ಹಂತದಲ್ಲಿ ಮಾನ್ಯ ವಾದಿ ಪರ ವಕೀಲರು ಮುಂದಿನ ಪಾಟೀ ಸವಾಲಿಗಾಗಿ ಸಮಯ ಕೋರಿರುತ್ತಾರೆ. ಸಮಯ ನೀಡಲಾಯಿತು.**

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸಾ ಸ ಇ ಒ.,**

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**